ದಿನಾಂಕಃ 09-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ.ಎಸ್ ಆರ್ ಬಿ ವಕೀಲರಿಂದಃ

ನಿಮಗೆ ಮಂಜೂರಾಗಿರುವ ಜಮೀನು ಸರ್ವೆ ನಂ.30. ಸರ್ವೆ ನಂ.30 ರಲ್ಲಿ 1 ನೇ ಬ್ಲಾಕ್. ನಿಪಿ.2 ಸ್ಕೆಚ್ ನಲ್ಲಿ ಇರುವ ಕೆರೆಯ ಪಕ್ಕದಲ್ಲಿ ಇರುವ 1 ನೇ ಬ್ಲಾಕ್ ನನಗೆ ಮಂಜೂರಾದಂತಹ ಜಮೀನು. ನಿಪಿ.2 ರ ಪ್ರಕಾರ 1 ನೇ ಬ್ಲಾಕ್ ಕೆರೆಗೆ ಹೊಂದಿಕೊಂಡಿದೆ ಎಂದರೆ ಸಾಕ್ಷಿಯು ಪಕ್ಕದಲ್ಲಿ ಇದೆ ಎಂದು ನುಡಿಯುತ್ತಾರೆ. ನಿಮಗೆ ಮಂಜೂರಾಗಿದೆ ಅಂತ ಹೇಳುವ ಮೊದಲೇ ಕೆರೆಗೆ ಹೊಂದಿಕೊಂಡಿರುವ ಜಾಗವು ಯಾರಿಗೂ ಮಂಜೂರು ಮಾಡಬಾರದು ಅಂತ ಸರ್ಕಾರಿದಿಂದಆದೇಶ ಆಗಿರುತ್ತದೆ ಎಂದರೆ ಸಾಕ್ಷಿಯು ಆದೇಶ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಕೆರೆ ಪಕ್ಕದಲ್ಲಿ ಇರುವ ಜಮೀನು ಉಳುಮೆ ಮಾಡಿದರೆ ಅದರ ಮಣ್ಣು ಕೆರೆಗೆ ಹೋಗಿ ಊಳು ತುಂಬುತ್ತದೆ ಅಂತ ಆ ಜಮೀನು ಮಂಜೂರು ಮಾಡಬಾರದು ಅಂತ ಆದೇಶ ಆಗಿರುತ್ತದೆ ಎಂದರೆ ಮತ್ತೆ ಪುನಃ ಪರಿಶೀಲನೆ ಆಗಿ ಪಕ್ಕದಲ್ಲಿ ಉಳುಮೆ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಮೊದಲು ಆಗಿರುವ ಆದೇಶ ಪುನರ್ ಪರಿಶೀನೆ ಆಗಿರುವ ಬಗ್ಗೆ ದಾಖಲೆಯನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ.

ದಿಃ25-07-1998 ರಲ್ಲಿ ಮಂಜೂರಾತಿಯಾಗಿರುವುದು ಯಾವುದು ಅಂತ ಗೊತ್ತಿರುವುದಿಲ್ಲ. ಸರ್ಕಾರದಿಂದ ನನಗೆ ಮಂಜೂರು ಆಗಿರುವ ನಿಯಮಾವಳಿಯ ಪ್ರತಿಯನ್ನು ಕೊಟ್ಟಿರುತ್ತೀರಾ ಎಂದರೆ ಕೊಟ್ಟಿರುತ್ತೇನೆ. 2000 ನೇ ಇಸ್ವಿ ಮೂರನೇ ತಿಂಗಳಲ್ಲಿ ಮಂಜೂರು ಆಗಿದ್ದು ದಿನಾಂಕ ಮರೆತುಹೋಗಿರುತ್ತದೆ. ನಿಪಿ.4 ರಂತೆ ನಿಮಗೆ ಯಾವುದೇ ಮಂಜೂರು ಆಗಿರುವುದಿಲ್ಲ ಎಂದರೆ ಸುಳ್ಳು 2001 ನೇ ಇಸ್ವಿಯಲ್ಲಿ ಯಾವುದೇ ಸಭೆ ಸೇರಿರುವುದಿಲ್ಲ ಎಂದರೆ ಸಾಕ್ಷಿಯು 2000 ನೇ ಇಸ್ವಿಯಲ್ಲಿ ನನಗೆ ಸಾಗುವಳಿ ಚೀಟಿ ಹಕ್ಕು ಪತ್ರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ ನಿಪಿ.4 ರಲ್ಲಿ ದಿಃ25-07-1998 ರ ನಡವಳಿ ಮಾತ್ರ ಎಂದರೆ ಸುಳ್ಳು ಸುಳ್ಳು ಮಂಜುರಾತಿ ದಾಖಲೆಗಳನ್ನು ತಂದು ನ್ಯಾಯಾಲಯಕ್ಕೆ ಹಾಕಿರುತ್ತೀರಿ ಎಂದರೆ ಸುಳ್ಳು ಸರ್ಕಾರದಿಂದ

ಕೂಡ ನಿಮಗೆ ಯಾವುದೇ ಮಂಜೂರಾತಿಯನ್ನು ನೀಡಿರುವುದಿಲ್ಲ ಎಂದರೆ ಸುಳ್ಳು ಸುಳ್ಳು ಮಂಜೂರಾತಿ ದಾಖಲೆ ಸೃಷ್ಟಿಮಾಡಿದ್ದರಿಂದ ಜಿಲ್ಲಾಧಿಕಾರಿಯವರು ನಿಮ್ಮ ಮಂಜೂರಾತಿಯನ್ನು ರದ್ದು ಪಡಿಸಿರುತ್ತಾರೆ ಎಂದರೆ ಸುಳ್ಳು

ಈ ಜಮೀನಿನ ಬಗ್ಗೆ ಮೊದಲು ನಿಮ್ಮ ಮತ್ತು ಬೇರೆಯವರ ನಡುವೆ ದಾವೆ ನಡೆದಿತ್ತು ಎಂದರೆ ಸರಿ. ನಾರಾಯಣಪ್ಪ ಬಿನ್ ಚೌಡಪ್ಪ ಎಂಬುವವರ ಮೇಲೆ ನಡೆದಿತ್ತು. ಸಾಕ್ಷಿ ಮುಂದುವರಿದು ಸಿವಿಲ್ ಕೇಸು ಇಲ್ಲ ಕ್ರಿಮಿನಲ್ ಕೇಸು ಇತ್ತು ಎಂದು ನುಡಿಯುತ್ತಾರೆ. ನಾರಾಯಣಪ್ಪನವರು ಜಮೀನನ್ನು ಉಳುಮೆ ಮಾಡಿರುವುದಿಲ್ಲ ಅಂತ ಜಿಲ್ಲಾಧಿಕಾರಿಯವರ ಮುಂದೆ ಅರ್ಜಿಯನ್ನು ಹಾಕಿದ್ದು ಅದನ್ನು ವಜಾ ಮಾಡಿರುತ್ತಾರೆ. ಆ ಪ್ರಕರಣದಲ್ಲಿ ನೀವು ಪಕ್ಷಗಾರರು ಎಂದರೆ ಅದನ್ನು ನಾನೇ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಅದರಲ್ಲಿ ತಕರಾರು ಹಾಕಿರುತ್ತೇನೆ. ಆ ತಕರಾರಿನಲ್ಲಿ ಇದು ಕೆರೆ ಪಕ್ಕದಲ್ಲಿ ಇರುವುದು ಮಂಜೂರಾತಿಗೆ ಯೋಗ್ಯವಲ್ಲ ಅಂತ ತಕರಾರು ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿಯು ಅವರು ಅನುಬೋಗದಲ್ಲಿ ಇಲ್ಲ ಅಂತ ಹೇಳಿ ತಕರಾರು ಹಾಕಿರುತ್ತೇನೆ. ಆ ಜಮೀನಿನಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಈ ವರ್ಷವೂ ಕೂಡ ನಾನು ಆ ಜಮೀನಿನಲ್ಲಿ ನೆಲಗಡಲೆ ಹಾಕಿರುತ್ತೇನೆ. ಅದಕ್ಕೆ ವಿಮಾ ಮಾಡಿಸಿ ವಿಮಾ ಪಾಲಿಸಿ ನೀಡಿರುತ್ತೇನೆ. ಅದೇ ರೀತಿ ಹಿಂದಿನ ವರ್ಷ ರಾಗಿ ಬೆಳೆ ಬೆಳೆದಿದ್ದು ಅದಕ್ಕೆ ದಾಖಲೆ ಕೊಟ್ಟಿರುತ್ತೇನೆ. ನೀವು ಯಾವುದೇ ಮಂಜೂರಾತಿಗೆ ಅರ್ಜಿಯನ್ನು ಹಾಕಿರುವುದಿಲ್ಲ ಎಂದರೆ ಸುಳ್ಳು ದಿಃ25-07-1998 ರಲ್ಲಿ ಮಂಜೂರಾದಂತಹ ಫಲಾನುಭವಿಗಳ ಹೆಸರಲ್ಲಿ ನಿಮ್ಮ ಹೆಸರು ಇರಲಿಲ್ಲ ಎಂದರೆ ಸುಳ್ಳು ರೆವಿನ್ಯೂ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ಅದರ ಮಧ್ಯದಲ್ಲಿ ನಿಮ್ಮ ಹೆಸರನ್ನು ಸೇರಿಸಿಕೊಂಡಿರುತ್ತೀರಿ ಎಂದರೆ ಸುಳ್ಳು

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

PW1 present, defendant counsel fully cross examined. For further plaintiff evidence.

Call on 30-08-2023.

**Prl. C. J. & JMFC,.**
**Chintamani**.